ನಿರ್ಭಯಾ ನಿಧಿ ರಾಜ್ಯಕ್ಕೆ 'ಚಿಕ್ಕಾಸು'

ಪ್ರಜಾವಾಣಿ ವಾರ್ತೆ

ನವದೆಹಲಿ: ಅತ್ಯಾಚಾರ ಹಾಗೂ ಪೋಕ್ಸೊ ಪ್ರಕರಣಗಳ ತ್ವರಿತ ವಿಚಾರಣೆಗಾಗಿ ವಿಶೇಷ ನ್ಯಾಯಾಲಯಗಳ ಸ್ಥಾಪನೆಗೆ ಕೇಂದ್ರ ಸರ್ಕಾರವು ನಿರ್ಭಯಾ ನಿಧಿಯಡಿ ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕಕ್ಕೆ ಕೊಟ್ಟಿರುವುದು ₹23 ಕೋಟಿಯಷ್ಟೆ.

ಲೋಕಸಭೆಯ ಪ್ರಶ್ನೋತ್ತರ ಅವಧಿಯಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರ ಪ್ರಶ್ನೆಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ನೀಡಿರುವ ಉತ್ತರದಲ್ಲಿ ಈ ಮಾಹಿತಿ ಇದೆ.

ನ್ಯಾಯಾಲಯಗಳ ಸ್ಥಾಪನೆಗೆ ₹5,123 ಕೋಟಿ ಅನುದಾನ ನೀಡಲು ಅಂತರ್ ಸಚಿವಾಲಯದ ಉನ್ನತಾಧಿಕಾರ ಸಮಿತಿ ಶಿಫಾರಸು ಮಾಡಿತ್ತು. ರಾಜ್ಯಕ್ಕೆ 2023-24ರಲ್ಲಿ ₹7.45 ಕೋಟಿ, 2024-25ರಲ್ಲಿ ₹7.65 ಕೋಟಿ ಹಾಗೂ 2025-26ರಲ್ಲಿ ₹8 ಕೋಟಿ ಬಿಡುಗಡೆಗೊಳಿಸಲಾಗಿದೆ.

'ಬೆಂಗಳೂರು ಸುರಕ್ಷಿತ ನಗರ' ಯೋಜನೆಗೆ ಗೃಹ ಸಚಿವಾಲಯವು ₹2,919 ಕೋಟಿ ಹಂಚಿಕೆ ಮಾಡಿದೆ. 2023-24ರಲ್ಲಿ ₹100 ಕೋಟಿ, 2024-25ರಲ್ಲಿ₹25 ಕೋಟಿ ಹಾಗೂ 2025-26ರಲ್ಲಿ ₹49 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಪೊಲೀಸ್ ಠಾಣೆಗಳಲ್ಲಿ ಮಹಿಳಾ ಸಹಾಯವಾಣಿಗಳ ಸ್ಥಾಪನೆಗಾಗಿ ಗೃಹ ಸಚಿವಾಲಯವು ₹165 ಕೋಟಿ ಹಂಚಿಕೆ ಮಾಡಿದೆ. ಇದರಲ್ಲಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯಕ್ಕೆ ಬಂದಿರುವುದು ₹15 ಲಕ್ಷ ಮಾತ್ರ. ಇಆರ್‌ಎಸ್‌ಎಸ್ (ತುರ್ತು ಸ್ಪಂದನಾ ಬೆಂಬಲ ವ್ಯವಸ್ಥೆ) ಯೋಜನೆಗಾಗಿ ₹364 ಕೋಟಿ ಹಂಚಿಕೆ ಮಾಡಲಾಗಿದ್ದರೂ, ರಾಜ್ಯಕ್ಕೆ ಮೂರು ವರ್ಷಗಳಲ್ಲಿ ಚಿಕ್ಕಾಸೂ ಬಂದಿಲ್ಲ.

ಮಹಿಳೆಯರು ಹಾಗೂ ಮಕ್ಕಳ ಸೈಬರ್ ಅಪರಾಧ ತಡೆ ಯೋಜನೆಗೆ ₹195 ಕೋಟಿ ಬಿಡುಗಡೆಗೆ ಉನ್ನತಾಧಿಕಾರ ಸಮಿತಿ ಶಿಫಾರಸು ಮಾಡಿದೆ. ಆದರೆ, ಬಂದಿರುವುದು ₹96 ಲಕ್ಷವಷ್ಟೆ. ಮಾನವ ಕಳ್ಳಸಾಗಣೆ ನಿಯಂತ್ರಣ ಘಟಕಗಳ ಸ್ಥಾಪನೆಗಾಗಿ ₹113 ಕೋಟಿ ಹಂಚಿಕೆ ಮಾಡಲಾಗಿದೆ. ಮೂರು ವರ್ಷಗಳಲ್ಲಿ ನಯಾಪೈಸೆ ಅನುದಾನ ಬಿಡುಗಡೆಯಾಗಿಲ್ಲ.

ನಿರ್ಭಯಾ ನಿಧಿಯಡಿ ಮಹಿಳಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವಾಲಯವು ಬೆಂಗಳೂರು ಮಹಾನಗರ ಸಾರಿಗೆ ನಿಗಮಕ್ಕೆ (ಬಿಎಂಟಿಸಿ) ₹56 ಕೋಟಿ ನೀಡುವುದಾಗಿ ಪ್ರಕಟಿಸಿತ್ತು. ಆದರೆ, ಮೂರು ವರ್ಷಗಳಲ್ಲಿ ಸಚಿವಾಲಯದಿಂದ ನಿಗಮಕ್ಕೆ ಯಾವುದೇ ಅನುದಾನ ಬಂದಿಲ್ಲ.

'ಹೈಕೋರ್ಟ್ ವ್ಯಾಪ್ತಿ ಕಸಿದ ಸರ್ಕಾರ'

ಪ್ರಜಾವಾಣಿ ವಾರ್ತೆ

ಸಮ್ಮೇಳನದಲ್ಲಿ ನ್ಯಾಯಮೂರ್ತಿಗಳಾದ ಎಸ್‌ಜೆ. ಪಂಡಿತ್, ವಿಭು ಬಖ್ರು, ಬಿ.ವಿ. ನಾಗರತ್ನ, ಜಯಂತ್ ಬ್ಯಾನರ್ಜಿ, ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷೆ ವಿಜಯಾ ರಹತ್ಕರ್ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: 'ಆಸ್ತಿ ದಾವೆಗಳಿಗೆ ಸಂಬಂಧಿಸಿದ ಮೇಲ್ಮನವಿಗಳನ್ನು ಹೈಕೋರ್ಟ್ ಬದಲಿಗೆ ನೇರವಾಗಿ ಜಿಲ್ಲಾ ನ್ಯಾಯಾಲಯಗಳಲ್ಲೇ ಸಲ್ಲಿಸಲು ಅವಕಾಶ ಮಾಡಿಕೊಡುವ, ಕರ್ನಾಟಕ ಸಿವಿಲ್ ನ್ಯಾಯಾಲಯಗಳ ತಿದ್ದುಪಡಿ-2023 ಕಾಯ್ದೆ ಮೂಲಕ ಕರ್ನಾಟಕ ಸರ್ಕಾರ ಹೈಕೋರ್ಟ್ ನ್ಯಾಯ ವ್ಯಾಪ್ತಿಯನ್ನು ಕಸಿದುಕೊಂಡಿದೆ' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅತೃಪ್ತಿ ವ್ಯಕ್ತಪಡಿಸಿದರು.

ನಗರದಲ್ಲಿ ಶನಿವಾರ ಆಯೋಜಿಸಲಾಗಿದ್ದ 'ಮಹಿಳೆಯರಿಗೆ ನ್ಯಾಯ' ಕುರಿತ ದಕ್ಷಿಣ ಪ್ರಾದೇಶಿಕ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, 'ಕರ್ನಾಟಕ ಸರ್ಕಾರವು ನಿಗದಿತ ಪ್ರಥಮ ಮೇಲ್ಮನವಿಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್ ಅಧಿಕಾರ ವ್ಯಾಪ್ತಿಯನ್ನು ತೆಗೆದು ಹಾಕಿರುವುದು ಆಶ್ಚರ್ಯವನ್ನುಂಟು ಮಾಡಿದೆ' ಎಂದರು.

'ಆಸ್ತಿಯು ಜಂಟಿ ಕುಟುಂಬಕ್ಕೆ ಸೇರಿದ್ದೇ ಅಥವಾ ಪ್ರತ್ಯೇಕ ಆಸ್ತಿಯೇ ಎಂಬ ವಿವಾದಗಳೂ ಸೇರಿದಂತೆ ಹಲವು ಬಗೆಯ ವ್ಯಾಜ್ಯಗಳಿಂದ ನೊಂದ ಮಹಿಳೆಯರು 136ನೇ ವಿಧಿಯಡಿಯಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಲು ಹೇಗೆ ಸಾಧ್ಯ' ಎಂದು ಪ್ರಶ್ನಿಸಿದ ಅವರು 'ತಿದ್ದುಪಡಿ ಹೈಕೋರ್ಟ್‌ನ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸುತ್ತದೆ ಮತ್ತು ಮಹಿಳಾ ದಾವೆದಾರರಿಗೆ ಅನನುಕೂಲ ಉಂಟು ಮಾಡುತ್ತದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಸವಾಲು: ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು, 'ತಂತ್ರಜ್ಞಾನವು ಸಬಲೀಕರಣದ ಸಾಧನವಾಗಿ ಮತ್ತು ದುರುಪಯೋಗದ ಆಯುಧವಾಗಿ ಹೊರಹೊಮ್ಮಿದೆ. ಸೈಬರ್ ಸ್ಟಾಕಿಂಗ್, ಡೀಪ್ ಫೇಕ್ ಚಿತ್ರಣ, ಆನ್‌ಲೈನ್ ಲೈಂಗಿಕ ಕಿರುಕುಳ, ಅಶ್ಲೀಲತೆ ಮತ್ತಿತರ ತಂತ್ರಜ್ಞಾನದ ಲಿಂಗ ಆಧಾರಿತ ಹಿಂಸೆಗಳು ಮಹಿಳೆಯರ ಸುರಕ್ಷತೆಗೆ ಹೊಸ ಸವಾಲುಗಳನ್ನು ಸೃಷ್ಟಿಸುತ್ತಿವೆ' ಎಂದು ಆತಂಕ ವ್ಯಕ್ತಪಡಿಸಿದರು.

'ನ್ಯಾಯದಾನ ವ್ಯವಸ್ಥೆ ಇಂತಹ ಅಪಾಯಗಳಿಗೆ ಪರಿಣಾಮಕಾರಿಯಾಗಿ ಪ್ರತಿಕ್ರಿಯಿಸುವ ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

'ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಳ'

'ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣ ಹೆಚ್ಚುತ್ತಿವೆ' ಎಂದು ಕಳವಳ ವ್ಯಕ್ತಪಡಿಸಿದ ನ್ಯಾಯಮೂರ್ತಿ ನಾಗರತ್ನ ಅವರು, ಇದಕ್ಕೆ ಪೂರಕವಾದ ಎನ್‌ಸಿಆರ್‌ಬಿ ದತ್ತಾಂಶಗಳನ್ನು ಉಲ್ಲೇಖಿಸಿದರು.

'2024ರಲ್ಲಿ ಮಹಿಳೆಯರ ವಿರುದ್ಧ 4,41,534 ಅಪರಾಧ ಪ್ರಕರಣ ದಾಖಲಾಗಿವೆ ಮತ್ತು ಶಿಕ್ಷೆಯ ಪ್ರಮಾಣ ಶೇ 5ರಷ್ಟು ಮಾತ್ರವೇ ಇದೆ. ತ್ವರಿತಗತಿ ಮತ್ತು ವಿಶೇಷ ನ್ಯಾಯಾಲಯಗಳು ಅಸ್ತಿತ್ವದಲ್ಲಿದ್ದರೂ ಎರಡು ಲಕ್ಷಕ್ಕೂ ಅಧಿಕ ಪ್ರಕರಣ ಬಾಕಿ ಉಳಿದಿವೆ' ಎಂದು ಹೇಳಿದರು.

'ಈ ನ್ಯಾಯಾಲಯಗಳ ಮೂಲಕ ಮಹಿಳಾ ಸಂತ್ರಸ್ತರಿಗೆ ಎಷ್ಟು ವೇಗವಾಗಿ ಮತ್ತು ಹೇಗೆ ಉತ್ತಮ ಪರಿಹಾರವನ್ನು ನೀಡಬಹುದೆಂಬ ಕುರಿತು ಆಲೋಚಿಸಬೇಕಿದೆ' ಎಂದರು.

'ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ನಿರ್ಭಯಾ ನಿಧಿ ವಿತರಣೆ ಮತ್ತು ಬಳಕೆಯ ಕುರಿತು ಅಧ್ಯಯನ ಕೈಗೊಳ್ಳಬೇಕು' ಎಂದು ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಕರೆ ನೀಡಿದರು.

'ಎಲ್ಲಾ ಬಗೆಯ ಸಂತ್ರಸ್ತ ಮಹಿಳೆಯರಿಗೆ ಕಾನೂನು ಹಾಗೂ ಆರ್ಥಿಕ ನೆರವು ನೀಡುವ ಮೂಲಕ ಅವರಿಗೆ ಸಹಾಯ ಮಾಡಲು ಕಾನೂನು ಸೇವಾ ಪ್ರಾಧಿಕಾರಗಳ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು' ಎಂದರು.

ಖಾಸಗಿಗೆ ಒಪಿಡಿ ಇಲ್ಲ: ಇಎಸ್‌ಐ

ಸಣ್ಣಪುಟ್ಟ ಅನಾರೋಗ್ಯಗಳಿಗೂ ರೆಫರಲ್ ಪತ್ರ ನೀಡುವುದಕ್ಕೆ ಕಡಿವಾಣ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಇಎಸ್‌ಐ ಆಸ್ಪತ್ರೆಗಳು ಹೊರರೋಗಿಗಳ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳಿಗೆ 'ರೆಫರಲ್' ಪತ್ರ ನೀಡುವುದಕ್ಕೆ ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಆಯುಕ್ತಾಲಯ ಕಡಿವಾಣ ಹಾಕಿದೆ.

ಈ ಬಗ್ಗೆ ಸುತ್ತೋಲೆ ಹೊರಡಿಸಿರುವ ಆಯುಕ್ತಾಲಯ, 'ಇಎಸ್‌ಐ ಡಿಸ್ಪೆನ್ಸರಿ ಮತ್ತು ಆಸ್ಪತ್ರೆಗಳಲ್ಲಿಯೇ ಪರೀಕ್ಷೆ ನಡೆಸಬೇಕು' ಎಂದು ಸೂಚಿಸಿದೆ.

ರಾಜ್ಯದಲ್ಲಿ 130ಕ್ಕೂ ಅಧಿಕ ಡಿಸ್ಪೆನ್ಸರಿಗಳಿವೆ. ಅಲ್ಲಿಗೆ ಬರುವ ರೋಗಿಗಳು ಜ್ವರ, ಶೀತ, ನೆಗಡಿ, ಕೆಮ್ಮು ಮುಂತಾದ ಸಣ್ಣ ಕಾಯಿಲೆಗೂ ಡಿಸ್ಪೆನ್ಸರಿಗಳಲ್ಲಿ ಪರೀಕ್ಷೆ ಮಾಡಿಸಿಕೊಳ್ಳದೇ ತಮಗೆ ಬೇಕಾದ ಖಾಸಗಿ ಆಸ್ಪತ್ರೆಗಳಿಗೆ ಬರೆಯಿಸಿಕೊಂಡು ಹೋಗುತ್ತಿದ್ದರು. ಖಾಸಗಿ ಆಸ್ಪತ್ರೆಗಳು ವಿಧಿಸುತ್ತಿದ್ದ ಭಾರಿ ವೈದ್ಯಕೀಯ ವೆಚ್ಚವನ್ನು ಸರ್ಕಾರ ಭರಿಸಬೇಕಿತ್ತು. ಈ ದುಬಾರಿ ವೆಚ್ಚಕ್ಕೆ ಕಡಿವಾಣ ಹಾಕಲು ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಲು ಬೇಕಿದ್ದ ರೆಫರೆಲ್ ಪತ್ರ ಮತ್ತು ಒಪಿಡಿ ಸೇವೆಯನ್ನು ಸ್ಥಗಿತಗೊಳಿಸಿದೆ.

ತುರ್ತು ಚಿಕಿತ್ಸೆಗೆ ಅಡ್ಡಿ ಇಲ್ಲ: 'ವಿಮಾ ರೋಗಿಗಳ ತುರ್ತು ಚಿಕಿತ್ಸೆಗಳನ್ನು ಖಾಸಗಿ ಆಸ್ಪತ್ರೆಯಲ್ಲಿ ಪಡೆದುಕೊಳ್ಳಬಹುದು. ಹೃದಯಾಘಾತ, ರಸ್ತೆ ಅಥವಾ ಕೆಲಸದ ಸ್ಥಳದಲ್ಲಿ ಅಪಘಾತ, ಹಾವು ಕಡಿತ, ಶೇ 30ಕ್ಕಿಂತ ಹೆಚ್ಚು ಸುಟ್ಟ ಗಾಯ, ವಿಷ ಪ್ರಾಶನ, ಪ್ಲೇಟ್‌ಲೆಟ್ ಕಡಿಮೆಯಾಗುವ ಡೆಂಗಿಯಂಥ ರೋಗ, ಹೆರಿಗೆ, ಮಕ್ಕಳ ಶಸ್ತ್ರಚಿಕಿತ್ಸೆ, ಪಾರ್ಶ್ವವಾಯುಗಳಿಗೆ ಖಾಸಗಿ ಆಸ್ಪತ್ರೆಗಳಿಗೆ ಹೋಗಬಹುದು. ಆ ವೆಚ್ಚವನ್ನು ಹಿಂದಿನಂತೆ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಆಯುಕ್ತಾಲಯ ಭರಿಸಲಿದೆ. ಆದರೆ, ಹೊರರೋಗಿಗಳಾಗಿ ಔಷಧ ಪಡೆಯುವುದನ್ನು ನಿಯಂತ್ರಿಸಲಾಗಿದೆ' ಎಂದು ಆಯುಕ್ತಾಲಯದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹೃದಯ ಸಂಬಂಧಿ, ನರ ಸಂಬಂಧಿ, ಜಠರ ಅಥವಾ ಜೀರ್ಣಾಂಗ, ಕ್ಯಾನ್ಸರ್, ರೇಡಿಯಾಲಜಿ, ಮೂತ್ರಪಿಂಡ, ಡಯಾಲಿಸಿಸ್ ಮುಂತಾದವರುಗಳಿಗೆ ರೆಫರಲ್ ಪತ್ರ ಕಡ್ಡಾಯವಾಗಿದೆ. ಇಎಸ್‌ಐ ಡಿಸ್ಪೆನ್ಸರಿಗಳಲ್ಲಿ ಚಿಕಿತ್ಸೆ ಸಿಗದಿದ್ದರೆ ಜಿಲ್ಲಾ ಆಸ್ಪತ್ರೆಗಳಿಗೆ ಆದ್ಯತೆ ನೀಡಬೇಕು. ಅಲ್ಲಿಯೂ ನುರಿತ ವೈದ್ಯರು ಲಭ್ಯವಿಲ್ಲದಿದ್ದರೆ ಮಾತ್ರ ಇಎಸ್‌ಐ ಹೊಂದಾಣಿಕೆ ಮಾಡಿಕೊಂಡ ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸಬಹುದು ಎಂದು ಮಾರ್ಗದರ್ಶಿ ಸೂತ್ರದಲ್ಲಿ ತಿಳಿಸಲಾಗಿದೆ.

ಪಿ1 ರೆಫರಲ್ ಪತ್ರವನ್ನು ವೈದ್ಯರೇ ಭರ್ತಿ ಮಾಡಬೇಕು. ತಪ್ಪು ಮಾಹಿತಿ ತುಂಬಬಾರದು. ಆಸ್ಪತ್ರೆಯಲ್ಲಿ ಐಸಿಯು ಸೌಲಭ್ಯವಿಲ್ಲದಿದ್ದರೆ, ಕಾರಣವನ್ನು ಐಸಿಯು ಅಭಾವ ಎಂದೇ ಆಯ್ಕೆ ಮಾಡಬೇಕು. ಹೊರತು ತಜ್ಞರ ಅಭಾವ ಎಂದು ಆಯ್ಕೆ ಮಾಡಬಾರದು ಎಂದು ಸ್ಪಷ್ಟವಾಗಿ ಸೂಚಿಸಲಾಗಿದೆ. ಅನಗತ್ಯವಾಗಿ ಪತ್ರ ನೀಡುವುದು ಇದರಿಂದ ತಪ್ಪಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಪಾಸಣೆಗೆ ಡಿಸ್ಪೆನ್ಸರಿಯೇ ಸಾಕು

ಎಲ್ಲ ಡಿಸ್ಪೆನ್ಸರಿ ಆಸ್ಪತ್ರೆಗಳಲ್ಲಿ ಎಂಬಿಬಿಎಸ್ ವೈದ್ಯರು ಇದ್ದಾರೆ. ಅವರು ಜ್ವರ, ಶೀತ ಮುಂತಾದ ಕಾಯಿಲೆಗಳಿಗೆ ಅವರೇ ಆರೋಗ್ಯ ತಪಾಸಣೆ ನಡೆಸಿ ಔಷಧ ನೀಡುತ್ತಾರೆ. ಗಂಭೀರ ಕಾಯಿಲೆಗಳಿದ್ದು, ಒಳರೋಗಿಗಳಾಗಿ ದಾಖಲಾಗುವಂಥದ್ದಾಗಿದ್ದರೆ ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸುತ್ತಾರೆ. ಹೊರರೋಗಿಗಳಿಗೂ ಚೀಟಿ ನೀಡಬೇಕು ಎಂಬುದು ಅರ್ಥವಿಲ್ಲದ ಬೇಡಿಕೆ ಎಂದು ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ಆಯುಕ್ತ ದಿನೇಶ್ ಕುಮಾರ್ ತಿಳಿಸಿದ್ದಾರೆ.

ಸಣ್ಣಪುಟ್ಟ ಕಾಯಿಲೆಗಳಿಗೂ ಖಾಸಗಿ ಆಸ್ಪತ್ರೆಗೆ ಚೀಟಿ ಬರೆಯಿಸಿಕೊಂಡು ಹೋಗುತ್ತಿರುವುದು ಕೇಂದ್ರ ಕಾರ್ಮಿಕ ಇಲಾಖೆಯ ಗಮನಕ್ಕೆ ಬಂದಿದ್ದರಿಂದ ಅಲ್ಲಿಂದಲೇ ಮಾರ್ಗಸೂಚಿ ಎಲ್ಲ ರಾಜ್ಯಗಳಿಗೆ ಕಳುಹಿಸಲಾಗಿದೆ. ಅದರ ಆಧಾರದಲ್ಲಿ ರಾಜ್ಯದಲ್ಲಿಯೂ ಸುತ್ತೋಲೆ ಕಳುಹಿಸಲಾಗಿದೆ. ಪ್ರಾಥಮಿಕ ಚಿಕಿತ್ಸೆಗಳಿಗಷ್ಟೇ ಇದು ಅನ್ವಯ. ಗಂಭೀರ ಕಾಯಿಲೆಗಳಿಗೆ ಇಲ್ಲವೇ ಶಸ್ತ್ರ ಚಿಕಿತ್ಸೆ ಅಗತ್ಯ ಇರುವ ಪ್ರಕರಣಗಳಾದರೆ ರೆಫರಲ್ ಆಸ್ಪತ್ರೆಗೆ ಕಳುಹಿಸಲಾಗುತ್ತದೆ. ಒಪಿಡಿಗೆ ಚೀಟಿ ಅಂದರೆ ರೆಫರಲ್ ಪತ್ರ ನೀಡುವುದನ್ನು ನಿಲ್ಲಿಸಲಾಗಿದೆ ಎಂದು ವಿವರಿಸಿದರು.

ಕಣ್ಣಿನ ಚಿಕಿತ್ಸೆಗೆ ಎರಡು 30ಗಳು

'ನನ್ನ ಪತ್ನಿಗೆ ಕಣ್ಣಿನ ಶಸ್ತ್ರ ಚಿಕಿತ್ಸೆ ಆಗಬೇಕಿತ್ತು. ಅದಕ್ಕೆ ರೆಫರಲ್ ಪತ್ರವೇ ಸಿಗಲಿಲ್ಲ. ಸಂಬಂಧಪಟ್ಟವರನ್ನೆಲ್ಲ ಹುಡುಕಿ ರೆಫರಲ್ ಪತ್ರ ಪಡೆದು ಚಿಕಿತ್ಸೆ ಕೊಡಿಸಲು ಎರಡು ತಿಂಗಳು ಬೇಕಾಯಿತು. ಹಿಂದೆ ಎಲ್ಲ ಇಂಥ ಚಿಕಿತ್ಸೆಗೆ 'ರನ್ನಿಂಗ್ ಲೆಟರ್' ಸಾಕಾಗುತ್ತಿತ್ತು. ಚಿಕಿತ್ಸೆ ಪಡೆದ ಬಳಿಕ ವಿಮಾ ಆಸ್ಪತ್ರೆಗೆ ನೀಡಿ ಮರುಪಾವತಿ ಮಾಡಿಸಿಕೊಳ್ಳಬಹುದಿತ್ತು. ಇದೀಗ ಎಲ್ಲವನ್ನು ನಿಯಂತ್ರಿಸಲು ಹೋಗಿ ನೌಕರರಿಗೆ ತೊಂದರೆ ನೀಡಲಾಗುತ್ತಿದೆ' ಎಂದು ಮೇಘರಾಜ್ ದೂರಿದರು.

'ಇದು ಸರ್ವಾಧಿಕಾರಿ ಧೋರಣೆ'

'ರೆಫರಲ್ ಪತ್ರ ನೀಡುವುದನ್ನು ಮತ್ತು ಹೊಂದಾಣಿಕೆಯ ಆಸ್ಪತ್ರೆಗಳಲ್ಲಿ ಒಪಿಡಿಗೆ ಹೋಗುವುದನ್ನು ನೌಕರರಿಗೆ ನಿರಾಕರಿಸಿರುವುದು ಸರ್ವಾಧಿಕಾರಿ ಧೋರಣೆಯಾಗಿದೆ. ಇಲ್ಲಿವರೆಗೆ ಇಲ್ಲದ ನಿಯಮಗಳನ್ನು ರೂಪಿಸಿ ಕಾರ್ಮಿಕರಿಗೆ ದ್ರೋಹ ಬಗೆಯಲಾಗುತ್ತಿದೆ' ಎಂದು ವಿಮಾನೌಕರರ ಸಂಘದ ಶಿವಮೊಗ್ಗ ಜಿಲ್ಲಾ ಅಧ್ಯಕ್ಷ ರಾಜುಸಾಬ್ ಟೀಕಿಸಿದ್ದಾರೆ.

ಬೆಂಗಳೂರು, ದಾವಣಗೆರೆ, ಮೈಸೂರು, ಕಲಬುರಗಿ, ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ ಮಾತ್ರ ಇಎಸ್‌ಐ ಆಸ್ಪತ್ರೆಗಳಿವೆ. ಅಲ್ಲಿ ಚಿಕಿತ್ಸೆ ಪಡೆಯುವವರಿಗೆ ಸಮಸ್ಯೆ ಇಲ್ಲ. ಉಳಿದ 25 ಜಿಲ್ಲೆಗಳಲ್ಲಿ ಇಎಸ್‌ಐ ಡಿಸ್ಪೆನ್ಸರಿಗಳು ಕಾರ್ಯನಿರ್ವಹಿಸುತ್ತಿದ್ದು, ಅಲ್ಲಿ ಎಂಬಿಬಿಎಸ್ ವೈದ್ಯರು ಮಾತ್ರ ಇದ್ದಾರೆ. ತಜ್ಞ ವೈದ್ಯರ ಕೊರತೆ ಇದೆ. ಹೀಗಿರುವಾಗ ಡಿಸ್ಪೆನ್ಸರಿಗಳಲ್ಲಿ ಚಿಕಿತ್ಸೆ ಪಡೆಯುವುದು ಹೇಗೆ ಎಂದು ಪ್ರಶ್ನಿಸಿದರು.

ಗಂಭೀರ ಕಾಯಿಲೆಗಳಿದ್ದಾಗಲೂ ಸುಲಭದಲ್ಲಿ ರೆಫರಲ್ ಪತ್ರ ನೀಡುತ್ತಿಲ್ಲ. ಅದಕ್ಕೆ ರೆಫರಲ್ ಸಮಿತಿಗೆ ಮೇಲ್ ಮಾಡಬೇಕು. ಡಿಸ್ಪೆನ್ಸರಿಯ ವೈದ್ಯರಲ್ಲ, ಇಎಸ್‌ಐ ಆಸ್ಪತ್ರೆಯ ವೈದ್ಯರು ಅನುಮೋದಿಸಬೇಕು. ಇದೆಲ್ಲ ಮುಗಿಯುವ ಹೊತ್ತಿಗೆ ರೋಗಿ ಉಳಿದರೆ ಅದೇ ಅದೃಷ್ಟ ಎಂದು ಹೇಳಿದರು.

ಗಟ್ಟಿಗಿತ್ತಿಯರಿಗೆ ಮನ್ನಣೆ

ಒಂದನೇ ಪುಟದಿಂದ...

ಇದನ್ನು ಗಂಭೀರವಾಗಿ ಪರಿಗಣಿಸಿದ ಹಿರಿಯರು, ಮದ್ಯ ಮಾರಾಟಗಾರರನ್ನು ಕರೆಸಿ, ಸಮಯದ ಗಡುವು ನೀಡಿ, ಅಂಗಡಿ ಬಂದ್ ಮಾಡಲು ಸೂಚಿಸಿದರು. ತಮ್ಮ ಮಾತನ್ನು ಕಡೆಗಣಿಸಿದರೆ ಪೊಲೀಸ್ ಠಾಣೆಯ ಮೆಟ್ಟಲು ಹತ್ತುವ ಎಚ್ಚರಿಕೆಯನ್ನೂ ನೀಡಿದರು.

ಹಿರಿಯರ ಮಾತಿಗೆ ಬೆಲೆ ಕೊಟ್ಟು ಅಂಗಡಿಯವರು ಮದ್ಯ ಮಾರಾಟ ಬಂದ್ ಮಾಡಿದ್ದರಿಂದ, ಗ್ರಾಮವು ವರ್ಷದಿಂದ ಮದ್ಯಮುಕ್ತವಾಗಿದೆ. ಮಂಡಳಿಯು ಇದೇ 16ರಂದು ಹಟ್ಟಿ ಗ್ರಾಮದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಹಾಗೂ ₹1 ಲಕ್ಷ ನಗದು ನೀಡಲಿದೆ. ಪ್ರತಿವರ್ಷ ಸಾಧಕ ವ್ಯಕ್ತಿಗಳಿಗೆ ಮಂಡಳಿಯ ವತಿಯಿಂದ ಪ್ರಶಸ್ತಿ ನೀಡಲಾಗುತ್ತಿತ್ತು. ಇದೇ ಮೊದಲ ಬಾರಿಗೆ ಗ್ರಾಮವೊಂದನ್ನು ಪ್ರಶಸ್ತಿಗಾಗಿ ಆಯ್ಕೆ ಮಾಡಿರುವುದು ವಿಶೇಷ.

ಮೊದಲು ಕೊಪ್ಪಳದ ಗವಿಮಠದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿಗೆ ಪ್ರಶಸ್ತಿ ನೀಡಲು ಮಂಡಳಿ ನಿರ್ಧರಿಸಿತ್ತು. ಆದರೆ, ವ್ಯಕ್ತಿಗಿಂತ ಸ್ವಯಂ ಪ್ರೇರಣೆಯಿಂದ ಬದಲಾದ ಹಟ್ಟಿ ಗ್ರಾಮಕ್ಕೆ ಪ್ರಶಸ್ತಿ ನೀಡುವಂತೆ ಸ್ವಾಮೀಜಿ ತಿಳಿಸಿದ್ದರಿಂದ ಮಂಡಳಿಯು ಈ ಸಲಹೆಯನ್ನು ಪರಿಗಣಿಸಿದೆ.

2,394 ಮಂದಿಗೆ ಉದ್ಯೋಗ

ಆಳ್ವಾಸ್ ಪ್ರಗತಿ

ಮೂಡುಬಿದಿರೆ (ದಕ್ಷಿಣ ಕನ್ನಡ): ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ಇಲ್ಲಿ ಹಮ್ಮಿಕೊಂಡಿದ್ದ 'ಆಳ್ವಾಸ್ ಪ್ರಗತಿ' ಉದ್ಯೋಗ ಮ